ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಿ. ರಾಚಯ್ಯ —ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ ಮತ್ತು ಉತ್ತರಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತಿದ್ದೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಗಿದೆ.

ಬೆಂಗಳೂರಿನಲ್ಲಿ ಚಲನ ಚಿತ್ರ ಮಂದಿರಗಳನ್ನು ಕೆಡವಿ ವಾಣಿಜ್ಯ ಸಂಕೀರ್ಣಗೆಳನ್ನು ಕಟ್ಟುತ್ತಿರುವುದು

೭೫. ಶ್ರೀ ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ಬೆಂಗಳೂರಿನಲ್ಲಿ ಚಲನಚಿತ್ರ ಮಂದಿರಗಳನ್ನು ಕೆಡವಿ ವಾಣಿಜ್ಯ ಸಂಕೀರ್ಣಗಳನ್ನು ಕಟ್ಟುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಇದರಿಂದ ಚಲನಚಿತ್ರ ಉದ್ಯಮಕ್ಕೆ ಹಾನಿಯಾಗುವುದೆಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ ವಾಣಿಜ್ಯ ಮಂಳಿಗೆಗೆ ಕಟ್ಟಡ ನಿರ್ಮಾಣ ತಡೆಗಟಲು ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಜೀವರಾಜ ಆಳ್ವ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಇಲಾಖೆಯ ರಾಜ್ಯ ಸಚಿವರು).—

(ಅ) ಹೌದು

(ಆ) ಹೌದು

(ಇ) ಕಟ್ಟಡಗಳ ನಿರ್ಮಾಣ ಹಾಗೂ ಕೆಡವಿಕೆಯ ವಿಷಯದಲ್ಲಿ ಬೆಂಗಳೂರು ನಗರ ಪ್ರಾಲಿಕೆ ತಮ್ಮ ಉಪ-ನಿಬಂಧನೆಗಳ ಪ್ರಕಾರ ಅನುಮತಿ ನೀಡುವುದು. ಆದರೆ ಈ ರೀತಿ ಕಟ್ಟಡಗಳ ಕೆಡವಿಕೆಯನ್ನು ತಡೆಗಟ್ಟಲು ಹಾಗೂ ಈ ಕೆಡವಿದ ಸ್ಥಳಗಳಲ್ಲಿ ಪುನಃ ಚಲನಚಿತ್ರ ಮಂದಿರಗಳನ್ನು ಕಟ್ಟಬೇಕೆಂಬ ನಿಬಂಧನೆ ಇರುವುದಿಲ್ಲ. ಈ ಬಗ್ಗೆ ನಿಬಂಧನೆಗಳು ಇಲ್ಲದಿರುವ ಕಾರಣಗಳಿಂದ ಸರ್ಕಾರಕ್ಕೆ ಚಲನಚಿತ್ರ ಮಂದಿರಗಳನ್ನು ಕೆಡುವುದನ್ನು ನಿಲ್ಲಿಸಲು ಸಾಧ್ಯವಾಗಿಲ್ಲ.

ರಾಯಚೂರು ಜಿಲ್ಲೆಯಲ್ಲಿ ಲೆವಿಧಾನ್ಯ ಸಂಗ್ರಹಣೆ

೭೦೧. ಶ್ರೀ ಬಸವರಾಜಪಾಟೀಲ್ (ಮಾನ್ವಿ).—ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ.

ಅ) ರಾಯಚೂರು ಜಿಲ್ಲೆಯಲ್ಲಿ ಸಂಗ್ರಹ ಮಾಡಿದ ಲೆವಿ ಧಾನ್ಯಗಳ ದರ, ಪ್ರಮಾಣವೆಷ್ಟು ?

ಆ) ರಾಜ್ಯದ ಇತರ ಜಿಲ್ಲೆಗಳಿಂದ ಸಂಗ್ರಹ ಮಾಡಿದ ಲೆವಿ ಧಾನ್ಯಗಳ ಪ್ರಮಾಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಇ) ಲೆವಿ ಧಾನ್ಯಗಳ ಸಂಗ್ರಹಣಕ್ಕೆ ಇರುವ ಸರ್ಕಾರಿ ಯಂತ್ರ ಯಾವುದು ?

ಶ್ರೀ ಜೆ. ಬಸವಣ್ಣಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು).—

ಅ) ಭಾರತ ಆಹಾರ ನಿಗಮದವರು ದಿನಾಂಕ ೨೪-೭-೫೫ರ ವರೆಗೆ ಒಟ್ಟು ೨೧೯೯೭ ಮೆಟಿಂಕ್ ಅಕ್ಕಿಯನ್ನು ಕೆಳಕಂಡ ಲೆವಿ ದರದಲ್ಲಿ ಸಂಗ್ರಹಣೆ ಮಾಡಿದ್ದಾರೆ.

ಅತ್ಯುತ್ತಮ ಅಕ್ಕಿ ಕ್ವಿಂಟಾಲಿಗೆ	...	ರೂ. ೨೨೮.೪೫
ಉತ್ತಮ ಅಕ್ಕಿ	...	ರೂ. ೨೨೨.೪೫
ಸಾಧಾರಣ ಅಕ್ಕಿ	...	ರೂ. ೨೧೬.೪೫